ಒಂದು ವಾರವಾದರೂ ಕೆಲಸಕ್ಕೆ ಬಂದಿರಲಿಲ್ಲ. ಫೋನ್ ಸ್ವಿಚ್‌ಆಫ್ ಎಂದು ಬರುತ್ತಿತ್ತು. ಮಗುವಿಗೆ ಜಾಸ್ತಿ ತೊಂದರೆಯಾಗಿರಬೇಕು, ಹುಷಾರಾದ ಮೇಲೆ ಬರುತ್ತಾಳೆಂದು ಇವರೂ ಸುಮ್ಮನಾಗಿದ್ದರು.

ಈ ಮಧ್ಯೆ ಒಂದು ದಿನ ರಾಜೀವನ ಆಫೀಸಿಗೆ ಪೊಲೀಸ್ ಸ್ಟೇಷನ್‌ನಿಂದ ಕರೆ ಬಂದಿತ್ತು. ಆ ಕಡೆಯಿಂದ ಪೊಲೀಸ್ ಇನ್‌ಸ್ಪೆಕ್ಟರ್ ಪರಸ್ಪರ ಉಭಯ ಕುಶಲೋಪರಿಯ ನಂತರ, 'ನಿಮ್ಮ ಪಕ್ಕದ ಬಡಾವಣೆಯಲ್ಲಿ ಒಂದು ವಾರದ ಹಿಂದೆ ಒಬ್ಬ ಮನೆಯ ಮಾಲೀಕನನ್ನು ಇಬ್ಬರು ಬಾಡಿಗೆದಾರರು ಕೊಂದು ಓಡಿಹೋಗಿರುವ ವಿಷಯ ನಿಮಗೆ ಗೊತ್ತಿರಬೇಕಲ್ಲಾ? ಪೇಪರ್, ಟೀವಿಯಲ್ಲೆಲ್ಲಾ ಬಂದಿತ್ತು' ಎಂದ ಪೊಲೀಸ್‌ಗೆ, 'ಗೊತ್ತು' ಎಂದು ಉತ್ತರಿಸಿದ. 'ಹಾಗೆ ಕೊಲೆ ಮಾಡಿ ಓಡಿಹೋದವರ ರೂಮಿನಲ್ಲಿ ಬಾಂಬ್ ತಯಾರು ಮಾಡುವ ಸಾಮಗ್ರಿಗಳೂ, ಹಲವು ಮಾಲ್‌ಗಳ ನಕ್ಷೆಗಳೂ ದೊರೆತಿವೆ. ಹಾಗಾಗಿ ಈ ಕೇಸ್‌ಗೆ ಕೇಂದ್ರ ತನಿಖಾದಳ ಪ್ರವೇಶಿಸಿದೆ. ಕೊಲೆಮಾಡಿ ಓಡಿಹೋದವರಲ್ಲಿ ಒಬ್ಬನನ್ನು ನೋಡಲು ಪದೇಪದೇ ಯಾರೋ ಒಬ್ಬ ಹೆಂಗಸು ಆ ಮನೆಗೆ ಬರುತ್ತಿದ್ದಳಂತೆ. ಆಕೆ ಯಾರದೋ ಮನೆಯಲ್ಲಿ ಅಡುಗೆ ಕೆಲಸ ಮಾಡುತ್ತಿದ್ದವಳೆಂದೂ ನಮಗೆ ಮಾಹಿತಿ ಸಿಕ್ಕಿದೆ. ಆದರೆ ಯಾರ ಮನೆಯಲ್ಲಿ ಕೆಲಸ ಮಾಡುತ್ತಿದ್ದಳು ಎನ್ನುವುದು ಗೊತ್ತಾಗಿಲ್ಲ. ಆದ್ದರಿಂದ ಸುತ್ತಮುತ್ತಲ ಬಡಾವಣೆಗಳಲ್ಲಿ ಕೆಲಸ ಮಾಡುವ ಎಲ್ಲಾ ಮನೆಗೆಲಸದವರ ವಿವರಗಳನ್ನು ತಂದು ಒಪ್ಪಿಸುವಂತೆ ಕೇಂದ್ರ ತನಿಖಾದಳ ನಮಗೆ ತಿಳಿಸಿದೆ. ನಿಮ್ಮ ಮನೆಯಲ್ಲೂ ಕೆಲಸಕ್ಕೆ ಒಬ್ಬಾಕೆ ಬರುತ್ತಿದ್ದಳು ಎಂದು ನಮಗೆ ಗೊತ್ತಾಗಿದೆ. ನೀವು ನಮಗೆ ನಾಳೆಯೊಳಗೆ ಅವಳ ಅಡ್ರೆಸ್ ಪ್ರೂಫ್ ಇರುವ ಗುರುತಿನ ಚೀಟಿ ಅಥವಾ ಆಧಾರ್ ಕಾರ್ಡು ತಂದು ಒಪ್ಪಿಸಿ. ತನಿಖೆಗೆ ಎಲ್ಲರ ವಿವರಗಳು ಬೇಕು' ಎಂಬ ಇನ್‌ಸ್ಪೆಕ್ಟರ್ ಮಾತುಗಳನ್ನು ಕೇಳಿ ರಾಜೀವನಿಗೆ ಜಂಘಾಬಲವೇ ಉಡುಗಿಹೋದಂತಾಯ್ತು. ಅವಳ ಹೆಸರು ಮತ್ತು ಫೋನ್ ನಂಬರ್ ಬಿಟ್ಟರೆ ಇವರ ಬಳಿ ಮನೆಗೆಲಸದಾಕೆಯ ವಿಳಾಸವಾಗಲೀ ಅಥವಾ ಯಾವುದೇ ಗುರುತಿನ ಚೀಟಿಯಾಗಲೀ ಇರಲಿಲ್ಲ.

ಹೆಚ್ಚುಕಡಿಮೆ ಆ ಘಟನೆ ನಡೆದ ಸಮಯದಿಂದ, ಈಕೆಯು ಕೆಲಸಕ್ಕೆ ಬಂದಿಲ್ಲ ಎಂಬ ವಿಷಯ ರಾಜೀವನ ತಲೆಯಲ್ಲಿ ಗುಂಗಿಹುಳದಂತೆ ಕೊರೆಯಲಾರಂಭಿಸಿ, ಆಫೀಸಿನಲ್ಲಿ ಕೆಲಸ ಮಾಡಲೂ ಆಗದೆ, ರಜಾ ಹಾಕಿ ಮನೆಗೆ ಬಂದವನೇ ಹೆಂಡತಿಗೆ ಫೋನ್ ಮಾಡಿ ತುರ್ತಾಗಿ ಮನೆಗೆ ಬರುವಂತೆ ಹೇಳಿದ. ರಾಜೀವ ಮನೆಗೆ ಬಂದ ಸ್ವಲ್ಪ ಸಮಯದಲ್ಲಿ ಆತುರಾತುರವಾಗಿ ಬಂದ ಹೆಂಡತಿಗೆ ನಡೆದ ವಿಷಯವನ್ನೆಲ್ಲಾ ತಿಳಿಸಿದ. ಆಕೆಯ ಆಧಾರ್ ಕಾರ್ಡ್ ಪಡೆದುಕೊಳ್ಳದಿದ್ದರ ಬಗ್ಗೆ ಹೆಂಡತಿಯ ಮೇಲೆ ರೇಗಿದ.

'ಬರೀ ಜಾತಿ ನೋಡಿದರೆ ಸಾಲದು, ಅವರ ಯಾವುದಾದರೂ ಗುರುತಿನ ಚೀಟಿಯನ್ನು ಇಟ್ಟುಕೊಳ್ಳಬೇಕು. ಅವಳು ನಮ್ಮ ಜಾತಿಯವಳು, ಒಳ್ಳೆಯವಳು ಎಂದರೆ ಪೊಲೀಸ್‌ನವರು ಕೇಳುತ್ತಾರೆಯೇ?' ಎಂದು ದಬಾಯಿಸಿದ ಗಂಡನಿಗೆ – 'ನೀವು ಏಕೆ ಮೈಮರೆತಿರಿ, ನೀವೇ ಕೇಳಬೇಕಿತ್ತು. ನಾನು ಒಂದು ಬಾರಿ ಕೇಳಿದ್ದೆ, ಆದರೆ ಆಕೆ ಆಧಾರ್ ಕಾರ್ಡ್ ಬಳ್ಳಾರಿ ಬಳಿಯ ತನ್ನ ಹಳ್ಳಿಯಲ್ಲಿ ಇಟ್ಟಿದ್ದೇನೆಂದೂ ಈ ಬಾರಿ ಊರಿಗೆ ಹೋಗಿಬಂದ ನಂತರ ತಂದು ಕೊಡುತ್ತೇನೆಂದೂ ಹೇಳಿದ್ದಳು. ಪೊಲೀಸ್‌ನವರು ಕೇಳಿದ್ದಕ್ಕಾಗಿ ಈಗ ಅದು ಮುಖ್ಯ ಎನಿಸಿದೆ. ಇಲ್ಲದಿದ್ದರೆ ಯಾರ ಮನೆಯಲ್ಲಿ ತಾನೇ ಮನೆಗೆಲಸದವರ ಆಧಾರ್ ಕಾರ್ಡ್‌ನ್ನು ಇಟ್ಟುಕೊಳ್ಳುತ್ತಾರೆ?' ಎಂದಳು.

'ಬಾಡಿಗೆದಾರರ ಮತ್ತು ಮನೆಕೆಲಸದವರ ಯಾವುದಾದರೂ ಗುರುತಿನ ಚೀಟಿ ಇಟ್ಟುಕೊಂಡಿರಬೇಕು' ಎಂದು ಪೊಲೀಸ್‌ನವರು ಹೇಳುತ್ತಾರೆ. ಅಡ್ರೆಸ್ ಇಲ್ಲದ ಅವಳನ್ನು ಈಗ ಹೇಗೆ ಹುಡುಕುವುದು?' ಎಂಬ ರಾಜೀವನ ಪ್ರಶ್ನೆಗೆ, 'ಅವಳು ಹಲವಾರು ಬಾರಿ ನನ್ನೊಂದಿಗೆ ಮಾತನಾಡುವಾಗ ಅವಳ ಮನೆ ಇರುವ ಸ್ಥಳ ಮತ್ತು ಅಲ್ಲಿಗೆ ತಾನು ನಿತ್ಯ ಯಾವ ಬಸ್ಸು ಹಿಡಿದು ಎಲ್ಲಿ ಇಳಿದು, ಹೇಗೆ ತಲುಪುತ್ತೇನೆ ಮತ್ತು ಮನೆಯ ಸುತ್ತಮುತ್ತಲಿನ ವಿವರಗಳನ್ನು ಸರಸ್ವತಿ ಹೇಳಿದ್ದಳು' ಎಂದು ಅವಳು ಹೇಳಿದ್ದ ವಿವರಗಳನ್ನೆಲ್ಲಾ ರಾಜೀವನಿಗೆ ಹೇಳಿದಳು. ಅದರಂತೆ ಈಗ ಆ ವಿವರಗಳಿಂದ ಅವಳ ವಿಳಾಸ ಪತ್ತೆ ಹಚ್ಚಲು ರಾಜೀವನು ಕಾರಿನಲ್ಲಿ ಹೊರಟು ಸಿನಿಮಾ ಟಾಕೀಸ್‌ವರೆಗೆ ಬಂದು, ಕಾರನ್ನು ಅಲ್ಲೇ ನಿಲ್ಲಿಸಿ, ಆ ಟಾಕೀಸಿನ ಪಕ್ಕದ ಇಕ್ಕಟ್ಟಾದ ದಾರಿಯಲ್ಲಿ ನಡೆದು, ಹೆಂಡತಿ ಹೇಳಿದ್ದ ಸರ್ಕಾರಿ ಶಾಲೆ, ನೀರಿನ ಟ್ಯಾಂಕ್